**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 441 ಗ್ರಾಪಂಅ 2016(ಭಾ-1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07.10.2016

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

**ಇವರಿಗೆ:**

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು
ಕಾವೇರಿ ಭವನ, ಕೆಂಪೇಗೌಡ ರಸ್ತೆ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ನಮೂನೆ 9 ಮತ್ತು 11ಎ ಗಳಿಗೆ ಇ-ಸ್ವತ್ತು ಮತ್ತು ಕಾವೇರಿ ತಂತ್ರಾಂಶಕ್ಕೆ ಸಂಪರ್ಕವನ್ನು ಕಲ್ಪಿಸುವ ಬಗ್ಗೆ.

**ಉಲ್ಲೇಖ:** ದಿನಾಂಕ: 04-10-2016 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಅಧ್ಯಕ್ಷತೆಯಲ್ಲಿ ಇ-ಸ್ವತ್ತು ಅನುಷ್ಠಾನದ ಬಗ್ಗೆ ನಡೆದ ಸಭೆಯ ನಡವಳಿಗಳು

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸಭಾ ನಡವಳಿಯಂತೆ ಇ-ಸ್ವತ್ತು ಮತ್ತು ಕಾವೇರಿ ತಂತ್ರಾಂಶಕ್ಕೆ ಸಂಪರ್ಕ ಕಲ್ಪಿಸಲು ಈ ಕೆಳಕಂಡಂತೆ ಕ್ರಮವಹಿಸುವಂತೆ ತಮ್ಮನ್ನು ಕೋರಿದೆ.

1. ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 9 ಮತ್ತು 11ಎ ವಿತರಿಸಲಾಗುತ್ತಿದ್ದು, ಪ್ರಸ್ತುತ ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ಸಂಪರ್ಕ ಕಡಿತಗೊಳಿಸಿದ್ದು ಉಲ್ಲೇಖಿತ ಸಭೆಯ ತೀರ್ಮಾನದಂತೆ ಸಂಪರ್ಕವನ್ನು ಪುನರ್ ಕಲ್ಪಿಸುವುದು.

2. ನಮೂನೆ 11ಬಿ ಗೆ ಮಾತ್ರ ಇ-ಸ್ವತ್ತು ಮತ್ತು ಕಾವೇರಿ ತಂತ್ರಾಂಶದಿಂದ ಸಂಪರ್ಕವನ್ನು ಕಡಿತಗೊಳಿಸಿ, ಕೈಬರಹದ ಮೂಲಕ ನೀಡುವ ನಮೂನೆ 11ಬಿ ಯನ್ನು ಉಪನೊಂದಣಾಧಿಕಾರಿಗಳು ನೊಂದಣಿ ಮಾಡಲು ಪರಿಗಣಿಸಲು ತಿಳಿಸುವುದು.

3. ದಿನಾಂಕ 13.01.2016 ರ ಆದೇಶದಲ್ಲಿ ನಮೂನೆ 11ಬಿ ನ್ನು ಇ-ಸ್ವತ್ತು ತಂತ್ರಾಂಶದಿಂದ ವಿನಾಯತಿ ನೀಡಿ, ಕೈಬರಹದಲ್ಲಿ ವಿತರಿಸಲು ಅವಕಾಶ ಕಲ್ಪಿಸಲಾಗಿದ್ದು, ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ನಮೂನೆ 9 ಮತ್ತು 11ಎ ಗೆ ಇ-ಸ್ವತ್ತು ಮತ್ತು ಕಾವೇರಿ ತಂತ್ರಾಂಶದಿಂದ ಸಂಪರ್ಕ ಕಡಿತಗೊಳಿಸಿರುವುದರಿಂದ ಈ ಅವಧಿಯಲ್ಲಿ ನೊಂದಣಿಯಾಗಿರುವ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶ ಮೂಲಕ ಮ್ಯುಟೇಶನ್ ಮಾಡಲು ಅವಕಾಶ

ಇಲ್ಲದಿರುವುದರಿಂದ, ಕಾವೇರಿ ತಂತ್ರಾಂಶದಿಂದ xml data ವನ್ನು ಇ-ಸ್ವತ್ತು ತಂತ್ರಾಂಶಕ್ಕೆ ಕಳುಹಿಸಲು ಕ್ರಮವಹಿಸುವುದು.

ಮೇಲಿನಂತೆ ತುರ್ತಾಗಿ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ 6 ಜಿಲ್ಲೆಗಳ ಜಿಲ್ಲಾ ಪಂಚಾಯತಿಗಳಿಗೂ ಹಾಗೂ ಈ ಕಛೇರಿಗೂ ಮಾಹಿತಿ ನೀಡಲು ಕೋರಿದೆ.

ತಮ್ಮ ವಿಶ್ವಾಸಿ,

(ಎಂ.ಕೆ.ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿ: ಮಾಹಿತಿಗಾಗಿ**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು.
3) ಶ್ರೀ ಸಮರ್ಥರಾಮ್, ಪ್ರಿನ್ಸಿಪಲ್ ಸಿಸ್ಟಂ ಅನಾಲಿಸ್ಟ್ ಎನ್.ಐ.ಸಿ., ಬೆಂಗಳೂರು.

**ದಿನಾಂಕ: 04-10-2016 ರಂದು ಬೆಳಿಗ್ಗೆ 11-30 ಗಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಅಧ್ಯಕ್ಷತೆಯಲ್ಲಿ ಇ-ಸ್ವತ್ತು ಅನುಷ್ಠಾನದ ಬಗ್ಗೆ ನಡೆದ ಸಭೆಯ ನಡವಳಿಗಳು.**

**ಹಾಜರಿದ್ದವರು:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
2) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು.
3) ನಿರ್ದೇಶಕರು (ಪಂ.ರಾಜ್-1) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
4) ಪ್ರಿನ್ಸಿಪಾಲ್ ಸಿಸ್ಟಮ್ ಅನಾಲಿಸ್ಟ್, ಎನ್.ಐ.ಸಿ. ಬೆಂಗಳೂರು.

ನಿರ್ದೇಶಕರು (ಪಂ.ರಾಜ್-1) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ರವರು ಪ್ರಸ್ತುತ ಇ-ಸ್ವತ್ತು ಅನುಷ್ಠಾನಗೊಳಿಸುವಾಗ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಸಭೆ ಕರೆದಿರುವುದಾಗಿ ತಿಳಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರು ಮಾತನಾಡುತ್ತಾ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕ್ರಮಬದ್ಧವಲ್ಲದ ಆಸ್ತಿಗಳಿಗೆ ವಿತರಿಸುವ ನಮೂನೆ 11ಬಿ ಯನ್ನು ಇ-ಸ್ವತ್ತು ತಂತ್ರಾಂಶದ ಮೂಲಕ ವಿತರಿಸಿರುವುದರಿಂದ ವಿನಾಯಿತಿ ನೀಡಲಾಗಿದ್ದು, ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ನಮೂನೆ 11ಬಿ ಗೆ ನೀಡಿರುವ ವಿನಾಯತಿಯನ್ನು ತಪ್ಪಾಗಿ ಅರ್ಥೈಸಿಕೊಂಡು ನಮೂನೆ 9 ಮತ್ತು 11ಎ ಗಳಿಗೆ ಸಂಪರ್ಕವನ್ನು ಕಡಿತಗೊಳಿಸಿರುವ ಬಗ್ಗೆ ಸಭೆಯಲ್ಲಿ ಸವಿವರವಾಗಿ ಚರ್ಚಿಸಿ, ತದನಂತರ ಈ ಕೆಳಕಂಡಂತೆ ತೀರ್ಮಾನ ತೆಗೆದುಕೊಳ್ಳಲಾಯಿತು.

1) ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 9 ಮತ್ತು 11ಎ ವಿತರಿಸಲಾಗುತ್ತಿದ್ದು, ಪ್ರಸ್ತುತ ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ನಮೂನೆ 9 ಮತ್ತು 11ಎ ಗಳಿಗೆ ಇ-ಸ್ವತ್ತು ಮತ್ತು ಕಾವೇರಿ ತಂತ್ರಾಂಶಕ್ಕೆ ಸಂಪರ್ಕವನ್ನು ಕಲ್ಪಿಸಲು ತೀರ್ಮಾನಿಸಲಾಯಿತು.
2) ನಮೂನೆ 11ಬಿ ಗೆ ಮಾತ್ರ ಇ-ಸ್ವತ್ತು ಮತ್ತು ಕಾವೇರಿ ತಂತ್ರಾಂಶದಿಂದ ಸಂಪರ್ಕವನ್ನು ಕಡಿತಗೊಳಿಸಿ, ಕೈಬರಹದ ಮೂಲಕ ನೀಡುವ ನಮೂನೆ 11ಬಿ ಯನ್ನು ಉಪನೊಂದಣಾಧಿಕಾರಿಗಳು ನೊಂದಣಿ ಮಾಡಲು ಪರಿಗಣಿಸಲು ತಿಳಿಸಲಾಯಿತು.
3) ದಿನಾಂಕ 13.01.2016 ರ ಆದೇಶದಲ್ಲಿ ನಮೂನೆ 11ಬಿ ನ್ನು ಇ-ಸ್ವತ್ತು ತಂತ್ರಾಂಶದಿಂದ ವಿನಾಯತಿ ನೀಡಿ, ಕೈಬರಹದಲ್ಲಿ ವಿತರಿಸಲು ಅವಕಾಶ ಕಲ್ಪಿಸಲಾಗಿದ್ದು, ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ನಮೂನೆ 9 ಮತ್ತು 11ಎ ಗೆ ಇ-ಸ್ವತ್ತು ಮತ್ತು ಕಾವೇರಿ ತಂತ್ರಾಂಶದಿಂದ ಸಂಪರ್ಕ ಕಡಿತಗೊಳಿಸಿರುವುದರಿಂದ ಈ ಅವಧಿಯಲ್ಲಿ ನೊಂದಣಿಯಾಗಿರುವ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶ ಮೂಲಕ ಮ್ಯುಟೇಶನ್ ಮಾಡಲು ಅವಕಾಶ ಇಲ್ಲದಿರುವುದರಿಂದ, ಕಾವೇರಿ ತಂತ್ರಾಂಶದಿಂದ xml data ವನ್ನು ಇ-ಸ್ವತ್ತು ತಂತ್ರಾಂಶಕ್ಕೆ ಕಳುಹಿಸಲು ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ಕ್ರಮವಹಿಸುವಂತೆ ತಿಳಿಸಲಾಯಿತು.
4) ಕೈಬರಹದ ನಮೂನೆ 11 ಬಿ ಆಧರಿಸಿ ಮಾಡುವ ನೋಂದಣಿಗಳಲ್ಲಿ ಉಪನೋಂದಾಣಾಧಿಕಾರಿಗಳು ನಮೂನೆ 11 ಬಿ ನಿಖರತೆಯ ಬಗ್ಗೆ ಖಚಿತಪಡಿಸಿಕೊಳ್ಳುವ ಮಾರ್ಗೋಪಾಯಗಳು ಕಷ್ಟವಾಗಿರುವುದರಿದ, ಕೆಲ ಸಂದರ್ಭಗಳಲ್ಲಿ ನಕಲಿ ದಾಖಲೆಗಳ ನೋಂದಣಿಯನ್ನು ತಡೆಗಟ್ಟಲು/ಗುರುತಿಸಲು ಸಾಧ್ಯವಾಗದೇ ಇರಬಹುದೆಂದು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಅಭಿಪ್ರಾಯ ವ್ಯಕ್ತಪಡಿಸಿದರು.

**ಸಂಖ್ಯೆ: ಗ್ರಾಅಪ 441 ಗ್ರಾಪಂಅ 2016(ಭಾ-1)**

(ರಾಜೀವ್ ಚಾವ್ಲಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ